# ಬಾರೇ ಗೋಪಮ್ಮ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 26
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 403
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 37
4. **Note:** Lyrics given here are as per Ref. 1. The wordings in Ref. 2 and Ref. 3 are similar and are not considered here.
5. **Note:** Ankita is different in these books. We have considered book in Ref.1 as standard and taken that Ankita for listing.
6. **Note:** Singer has followed lyrics as in Ref. 1.

ರಾಗ: ಸೌರಾಷ್ಟ್ರ ತಾಳ: ಅಟ

ಬಾರೇ ಗೋಪಮ್ಮ ನಿನ್ನ ಬಾಲಯ್ಯನಳುತಾನೆ,
ಬಾರೇ ಗೋಪಮ್ಮ, ನಾವ್ -
ಆರೂ ತೂಗಿದರೂ ಮಲಗನು ಮುರವೈರಿ,
ಬಾರೇ ಗೋಪಮ್ಮ || ಪ ||

ನೀರೊಳಗಾಡಿ ಮೈಯೊರಸೆಂದು ಅಳುತಾನೆ, ಬಾರೇ ಗೋಪಮ್ಮ
ಮೇರುವ ಹೊತ್ತು ಮೈ ಭಾರವೆಂದಳುತಾನೆ, ಬಾರೇ ಗೋಪಮ್ಮ
ಧರೆಯ ನೆಗಹಿ ತನ್ನ ದಾಡೆನೊಂದಳುತಾನೆ, ಬಾರೇ ಗೋಪಮ್ಮ
ದುರುಳ ರಕ್ಕಸನ ಕರುಳ ಕಂಡಳುತಾನೆ, ಬಾರೇ ಗೋಪಮ್ಮ || 1 ||

ನೆಲವನಳೆದು ಪುಟ್ಟ ಚರಣನೊಂದಳುತಾನೆ, ಬಾರೇ ಗೋಪಮ್ಮ
ಛಲದಿಂದ ಕೊಡಲಿಯ ಪಿಡಿವೆನೆಂದಳುತಾನೆ, ಬಾರೇ ಗೋಪಮ್ಮ
ಬಲು ಕಪಿಗಳ ಕಂಡಂಜಿಕೊಂಡಳುತಾನೆ, ಬಾರೇ ಗೋಪಮ್ಮ
ನೆಲುವಿನ ಬೆಣ್ಣೆ ಕೈ ನಿಲುಕದೆಂದೆಳುತಾನೆ, ಬಾರೇ ಗೋಪಮ್ಮ || 2 ||

ಬಟ್ಟೆ ಬತ್ತಲೆ ನಿಂತು ಎತ್ತಿಕೊಯೆಂದಳುತಾನೆ, ಬಾರೇ ಗೋಪಮ್ಮ
ಶ್ರೇಷ್ಠ ತೇಜಿಯನ್ನು ಹತ್ತಿಸೆಂದಳುತಾನೆ, ಬಾರೇ ಗೋಪ್ಯಮ್ಮ
ತೊಟ್ಟಿಲೊಳಗೆ ಮಲಗಲೊಲ್ಲನು ಮುರವೈರಿ, ಬಾರೇ ಗೋಪಮ್ಮ
ಸೃಷ್ಟಿಯೊಳು ಪುರಂದರ ವಿಠಲ ಕರೆಯುತಾನೆ, ಬಾರೇ ಗೋಪಮ್ಮ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಪ ಸ್ತ್ರೀಯೊಬ್ಬಳು ಯಶೋದೆಯ ಬಳಿಗೆ ಬಂದು ಶ್ರೀ ಕೃಷ್ಣನು ಅಳುತ್ತಲಿದ್ದಾನೆ. ಅವನನ್ನು ರಮಿಸು ಎಂದು ಹೇಳುತ್ತಲೆ, ದಶಾವತಾರದ ರೂಪಕದೊಂದಿಗೆ ಶ್ರೀ ಕೃಷ್ಣನನ್ನು ಬಣ್ಣಿಸಿದಂತೆ ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ.

**ನೆಗಹು** = ನೆಗಪು ನಿಲ್ಲುವಿಕೆ, ಎತ್ತು, ಚಿಮ್ಮು

**ನೀರೊಳಗಾಡಿ .... ಅಳುತಾನೆ** = ಮತ್ಸ್ಯಾವತಾರ

**ಮೇರುವ .... ಅಳುತಾನೆ** = ಕೂರ್ಮಾವತಾರ

**ಧರೆಯ .... ಅಳುತಾನೆ** = ವರಾಹಾವತಾರ

**ದುರುಳ .... ಅಳುತಾನೆ** = ನರಸಿಂಹಾವತಾರ

**ನೆಲವನಳೆದು .... ಅಳುತಾನೆ** = ವಾಮನವತಾರ

**ಛಲದಿಂದ .... ಅಳುತಾನೆ** = ಪರಶುರಾಮಾವತಾರ

**ಬಲು ಕಪಿ .... ಅಳುತಾನೆ** = ರಾಮಾವತಾರ

**ನೆಲುವಿನ .... ಅಳುತಾನೆ** = ಕೃಷ್ಣಾವತಾರ

**ಬಟ್ಟೆ ಬತ್ತಲೆ .... ಅಳುತಾನೆ** = ಬೌದ್ಧಾವತಾರ

**ಶ್ರೇಷ್ಠ ತೇಜಿಯ .... ಅಳುತಾನೆ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Krishna Leele, Dashavatara

**Sub-Category:** Krishna, dashavatara, niru, ATa, bhumi, parvata, asura, benne, kudure, kai, bhaya,
**Pravachana:** NA
**Explanation:** NA